## 6

# ಪರಿಶುದ್ಧಾತ್ಮನ ವರಗಳು

*"ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು ಒಬ್ಬನೇ: ಸೇವೆ ಗಳಲ್ಲಿ ಬೇರೆ ಬೇರೆ ವಿಧಗಳುಂಟು. ಕರ್ತನು ಒಬ್ಬನೇ; ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಲುಂಟು, ಸರ್ವರಲ್ಲಿಯೂ ಸರ್ವ ಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ. ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥ ವಾಗಿ ಕೊಡಲ್ಪಟ್ಟಿವೆ" (1 ಕೊರಿಂಥ 12:4-7).*

ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ವರಗಳು ಪರಿಶುದ್ಧಾತ್ಮನ "ವರ"ದೊಂದಿಗೆ ಗಲಿಬಿಲಿ ಮಾಡಬಾರದು. ಪರಿಶುದ್ಧಾತ್ಮನ "ವರ" (ಗ್ರೀಕ: *dorea*)ವು ಪರಿಶುದ್ಧಾತ್ಮನು ತಾನೇ ಆಗಿದ್ದಾನೆ (ಅಪೊಸ್ತಲರ ಕೃತ್ಯಗಳು 10:44, 45; 11:17), ಆದರೆ "ವರಗಳು" (ಗ್ರೀಕ: *chrisma*) ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ದೈವಿಕವಾಗಿ ಹಂಚಲ್ಪಟ್ಟ ಅಲೌಕಿಕ ಬಲಗಳಾಗಿವೆ (ರೋಮಾಪುರ 1:11; 12:6; 1 ಕೊರಿಂಥ 1:7; 12:4, 9, 28, 30, 31; 1 ತಿಮೊಥೆ 4:14; 2 ತಿಮೊಥೆ 1:6). ಸ್ವಭಾವದಲ್ಲಿ ಅಲೌಕಿಕವಲ್ಲದ (ರೋಮಾಪುರ 5:15, 16; 6:23; 11:29; 12:6-8; 1 ಪೇತ್ರ 4:10, 11) ವರಗಳಿಗೆ ("ಸಹಕಾರ" ಎಂದೂ ಭಾಷಾಂತರಿಸಲ್ಪಟ್ಟಿದೆ; 2 ಕೊರಿಂಥ 1:11) *chrisma* ಸಹ ಸಂಬಂಧಿಸಲ್ಪಡ ಬಹುದು.

"ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು ಒಬ್ಬನೇ" (1 ಕೊರಿಂಥ 12:4) ಎಂದು ಪೌಲನು ಹೇಳಿದ್ದಾನೆ. ವಿವಿಧ ವರಗಳಿರುವುದು ಕೊರಿಂಥದವರಿಗೆ ಭಿನ್ನವಾದ ಆತ್ಮಗಳಿದ್ದವೆಂದು ಅರ್ಥವಾಗುವದಿಲ್ಲ ಎಂಬುದು ಪೌಲನ ಅಂಶವಾಗಿತ್ತು. ವಿಭಾಗಗಳ ಬದಲಾಗಿ (1 ಕೊರಿಂಥ 1:10-12) ಆತ್ಮನ ವಿವಿಧ ವರಗಳು "ಆತ್ಮನ ಐಕ್ಯತೆ"ಯನ್ನು ತರತಕ್ಕದ್ದು (ಎಫೆಸ 4:3). ಅನೇಕ ಅಂಗಗಳನ್ನೊಳಗೊಂಡಿರುವ ಮಾನವ ದೇಹವನ್ನು ಕ್ರಿಸ್ತನ ದೇಹಕ್ಕೆ ಹೋಲಿಸುವದರಿಂದ ಒಂದಾಗಿರುವಿಕೆಯನ್ನು ಕುರಿತ ಸತ್ಯವನ್ನು ಪೌಲನು ಉದಹರಿಸಿದನು (1 ಕೊರಿಂಥ 12:12, 13).

### ವರಗಳ ವಿವಿಧತೆಗಳು

1 ಕೊರಿಂಥ 12ರಲ್ಲಿ ಪೌಲನು ಒಂಭತ್ತು ವರಗಳನ್ನು ಯಾದಿ ಮಾಡಿದ್ದಾನೆ: "ಜ್ಞಾನ ವಾಕ್ಯವು," "ವಿದ್ಯಾವಾಕ್ಯವು" (ವಚನ 8); "ನಂಬಿಕೆ," "ರೋಗಗಳನ್ನು ವಾಸಿ ಮಾಡುವ ವರ" (ವಚನ 9); "ಮಹತ್ತುಗಳನ್ನು ಮಾಡುವ ವರವು," "ಪ್ರವಾದನೆಯ ವರವು," "ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು," "ವಿವಿಧ ವಾಣಿಗಳನ್ನಾಡುವ ವರವು" ಮತ್ತು "ವಾಣಿಗಳ ಅರ್ಥವನ್ನು ಹೇಳುವ ವರವು" (ವಚನ 10). ಈ ಎಲ್ಲಾ ವರ ಗಳು ಯಾವುದೇ ಕೊರಿಂಥದ ಕ್ರೈಸ್ತನಿಗಿರಲಿಲ್ಲ. "ಭಾವನೆ ಹಂಚುವಂಥದ್ದಾಗಿರುತ್ತದೆ ಹಾಗೂ ಯಾರೂ ಪ್ರತಿಯೊಂದನ್ನೂ ಪಡೆದುಕೊಳ್ಳುವದಿಲ್ಲ ಎಂದು ಇದು ಸೂಚಿಸುತ್ತದೆ" ಎಂದು F. W. Grosheide ಸರಿಯಾಗಿ ಗಮನಿಸಿದ್ದಾರೆ.[1] ಬಹುಶಃ

ಅಪೊಸ್ತಲರು ಪ್ರತಿಯೊಂದು ವರವನ್ನು ಹೊಂದಿಕೊಂಡರು, ಆದರೆ ಬೇರೆ ಯಾರೂ ಹೊಂದಿಕೊಳ್ಳಲಿಲ್ಲ.

ಕೊರಿಂಥ ಸಭೆಯಲ್ಲಿ ಅದ್ಭುತಕರವಾದ ವರಗಳು ಅದೇ ಮೂಲದಿಂದ ಬಂದವು ಮತ್ತು ಆತ್ಮನ ಚಿತ್ತಕ್ಕೆ ಅನುಸಾರವಾಗಿ ಕೊಡಲ್ಪಟ್ಟಿದ್ದವು. ಈ ಸಂಗತಿಯನ್ನು ಒತ್ತಿಹೇಳುವಲ್ಲಿ ಪೌಲನು ಜಾಗರೂಕತೆಯಿಂದ ಇಟ್ಟನು: "ಈ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ" (1 ಕೊರಿಂಥ 12:11). ಗೋರ್ಡ್ ಫೀ ಹೀಗೆ ವ್ಯಾಖ್ಯಾನಿಸಿದ್ದಾರೆ, "ಪ್ರತಿಯೊಬ್ಬ ದೈವಿಕ ವ್ಯಕ್ತಿಯೊಂದಿಗೆ 'same' (ಒಂದೇ) ಎಂಬುದನ್ನು ಪುನಃ ಪುನಃ ಹೇಳಿದ್ದು ಒಬ್ಬ ಆತ್ಮ/ಕರ್ತ/ದೇವರು ತನ್ನನ್ನು ವರಗಳ ಮತ್ತು ಸೇವೆಗಳ ಮಹಾ ವಿವಿಧತೆಯಲ್ಲಿ ಪ್ರಕಟಿಸಿಕೊಳ್ಳುತ್ತಾನೆಂಬುದನ್ನು ಒತ್ತಿ ಹೇಳುವಂತೆ ತೋರುತ್ತದೆ. ಹೀಗೆ ದೇವರ ಐಕ್ಯತೆಯು ವರಗಳಲ್ಲಿ ಏಕರೂಪತೆಯನ್ನು ಅನ್ವಯಿಸುವದಿಲ್ಲ; ಒಬ್ಬನೇಯಾದ ಅದೇ ದೇವರು ವಿವಿಧತೆಗೆ ತಾನೇ ಜವಾಬ್ದಾರನಾಗಿದ್ದಾನೆ."[2]

ಗರ್ವದ ಕಾರಣದಿಂದ ಮತ್ಸರ ಇಲ್ಲವೇ ವಿಭಜನೆಗಳು ಉಂಟಾಗುವದಕ್ಕಿಂತ, ವರಗಳನ್ನು ಹೊಂದಿಕೊಂಡಿರುವದರಿಂದ ಪರಿಣಾಮವಾಗಿ ಐಕ್ಯತೆಯು ಇರತಕ್ಕದ್ದು. ವಿವಿಧ ವರಗಳನ್ನು ಸ್ವೀಕರಿಸುವವರೆಲ್ಲರೂ ಸ್ವಂತ ಅರ್ಹತೆ ಇಲ್ಲವೇ ಸಾಮರ್ಥ್ಯದ ಮುಖಾಂತರ ದೊರಕಿಸಿಕೊಂಡಿರುವದಿಲ್ಲ, ಆದರೆ ಎಲ್ಲಾ ಮಹಿಮೆ, ಗೌರವವು (ಆತ್ಮನ ಮುಖಾಂತರ) ವರಗಳನ್ನು ಕೊಟ್ಟ ಯೇಸುವಿಗೆ ಸಲ್ಲಿಸತಕ್ಕದೆಂಬುದನ್ನು ಅರಿತುಕೊಳ್ಳಬೇಕು.

ಕೊರಿಂಥದಲ್ಲಿಯ ಪ್ರತಿಯೊಬ್ಬ ಕ್ರೈಸ್ತನಿಗೆ ತನ್ನ ಸ್ವಂತ ವೈಯಕ್ತಿಕ ವರವಿರುವುದು, ಆದರೆ ಪ್ರತಿಯೊಬ್ಬನಿಗೆ ಪ್ರತಿಯೊಂದು ವರವಿರುವದಿಲ್ಲ ಎಂಬ ಸಂಗತಿಯನ್ನು ಪೌಲನು ಒತ್ತಿ ಹೇಳಿದನು:

> ಎಲ್ಲರೂ ಅಪೊಸ್ತಲರೋ? ಎಲ್ಲರೂ ಪ್ರವಾದಿಗಳೋ? ಎಲ್ಲರೂ ಉಪದೇಶಕರೋ? ಎಲ್ಲರೂ ಮಹತ್ಕಾರ್ಯಗಳನ್ನು ಮಾಡುವವರೋ? ರೋಗ ವಾಸಿ ಮಾಡುವ ವರಗಳು ಎಲ್ಲರಿಗೂ ಉಂಟೋ? ಎಲ್ಲರೂ ವಾಣಿಗಳನ್ನಾಡುವರೋ? ವಾಣಿಗಳ ಅರ್ಥವನ್ನು ಹೇಳುವದಕ್ಕೆ ಎಲ್ಲರಿಗೂ ಶಕ್ತಿಯುಂಟೋ? (1 ಕೊರಿಂಥ 12:29, 30).

"... ಈ ಎರಡು ವಚನಗಳು ವಾಕ್ಚಾತುರ್ಯದ ಏಳು ಪ್ರಶ್ನೆಗಳನ್ನು ತುಂಬಿಕೊಂಡಿದೆ, ಅವೆಲ್ಲವೂ 'ಇಲ್ಲ' ಎಂಬ ಉತ್ತರವನ್ನು ನಿರೀಕ್ಷಿಸುತ್ತವೆ"[3] ಎಂದು ರೋಬರ್ಟ್ ಬ್ರಾಚರ್ ತೋರಿಸಿದ್ದಾರೆ. ಪ್ರತಿಯೊಬ್ಬ ಕ್ರೈಸ್ತರನ್ನು ಒಂದೇ ಸಾಮರ್ಥ್ಯಗಳಿಂದ ತುಂಬಿಸುವ ಉದ್ದೇಶಕ್ಕಾಗಿ ಅದ್ಭುತಕರವಾದ ವರಗಳು ಕೊಡಲ್ಪಟ್ಟಿರುವದಿಲ್ಲ.

## ವರಗಳ ಉದ್ದೇಶ

ವರಗಳ ಉದ್ದೇಶವು ವರಗಳನ್ನು ಹೊಂದಿದವನ ಪ್ರಯೋಜನಕ್ಕಾಗಿ ಇರುವದಿಲ್ಲ, ಆದರೆ ಒಂದುಕೂಡಿದ ಇಡೀಯಾದದ್ದಕ್ಕೆ ಪ್ರಯೋಜನವಾಗುವಂತೆ ಸಭೆಯನ್ನು ಕಟ್ಟುವದಕ್ಕಾಗಿ ಇರುವುದು. ಈ ಸತ್ಯವನ್ನು ಕೊರಿಂಥದವರು ಕಡೆಗಣಿಸಬಾರದೆಂದು ಸ್ಪಷ್ಟಪಡಿಸಿದನು.

> ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ (1 ಕೊರಿಂಥ 12:7).

> ... ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ (1 ಕೊರಿಂಥ 12:24, 25).

ಇತರ ಪ್ರತಿಯೊಂದು ವರದಂತೆ, ಪ್ರವಾದನೆಯ ವರವು ಸಭೆಯ ಭಕ್ತಿ ವೃದ್ಧಿಗೋಸ್ಕರ ಕೊಡಲ್ಪಟ್ಟಿದೆ: "ಪ್ರವಾದಿಸುವವನಾದರೋ ಮನುಷ್ಯರ ಸಂಗಡ ಮಾತಾಡುವವನಾಗಿ ಅವರಿಗೆ ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ ಸಂತೈಸುವಿಕೆಯನ್ನೂ ಉಂಟು ಮಾಡುತ್ತಾನೆ" (1 ಕೊರಿಂಥ 14:3); "ಹಾಗೆಯೇ ನೀವೂ ಆತ್ಮ ಪ್ರೇರಿತವಾದ ನುಡಿಗಳನ್ನಾಡುವದಕ್ಕೆ ಅಪೇಕ್ಷಿಸುವವರಾಗಿರುವದರಿಂದ ಸಭೆಗೆ ಭಕ್ತಿವೃದ್ಧಿ ಉಂಟಾಗುವ ಹಾಗೆ ಅದಕ್ಕಿಂತಲೂ ಹೆಚ್ಚಾದದ್ದನ್ನು ಮಾಡುವದಕ್ಕೆ ಪ್ರಯತ್ನಿಸಿರಿ" (1 ಕೊರಿಂಥ 14:12); "... ನೀವು ಏನು ನಡಿಸಿದರೂ ಭಕ್ತಿವೃದ್ಧಿ ಗಾಗಿಯೇ ನಡಿಸಿರಿ" (1 ಕೊರಿಂಥ 14:26). "ಏನು ನಡಿಸಿದರೂ" ಎಂಬ ಮಾತು ಕ್ರೈಸ್ತ ಸಭಾಕೂಟಗಳಲ್ಲಿ ವಾಣಿಗಳನ್ನಾಡುವ ಮತ್ತು ಇತರ ಎಲ್ಲಾ ವರಗಳು ವೈಯಕ್ತಿಕ ಪ್ರಯೋಜನಕ್ಕಾಗಿ ಅಲ್ಲ ಆದರೆ ಸಭೆಯ ಭಕ್ತಿವೃದ್ಧಿಗಾಗಿ ಉಪಯೋಗಿಸಲ್ಪಡ ಬೇಕು ಎಂದರ್ಥ ಕೊಡುತ್ತದೆ.

ಫ್ರೆಡರಿಕ್ ಡೇಲ್ ಬ್ರೂನ್ನರ್ ಹೀಗೆ ವ್ಯಾಖ್ಯಾನಿಸಿದ್ದಾರೆ,

> ಸಭೆಯ ಶ್ರೇಷ್ಠ ದೃಷ್ಟಿಕೋನದಿಂದ ಪೌಲನು ವರಗಳ ಕಡೆಗೆ ನೋಡುತ್ತಾನೆ ಮತ್ತು ಈ ದೃಷ್ಟಿಕೋನದಿಂದ ಯಾವುದೇ ವರಕ್ಕೆ ಅದರ ಅಸ್ತಿತ್ವದಲ್ಲಿ ಸುಮ್ಮನೇ ಬೆಲೆಕಟ್ಟುವದಿಲ್ಲ ಆದರೆ ಇತರರಿಗೆ ಅವರ ಕಟ್ಟುವಿಕೆಗಾಗಿ ಅದು ತಿಳಿಯುವ ರೀತಿಯಲ್ಲಿ ಸಂಪರ್ಕಿಸುವದರಲ್ಲಿ ಬೆಲೆಕಟ್ಟುತ್ತಾನೆ. ಪೌಲನ ವಿಚಾರದಲ್ಲಿ, ಒಂದು ವರವು ಸಭೆಗಾಗಿ ಉಪಯೋಗಿಸಲ್ಪಡದಿದ್ದರೆ, ಅದು ವೈಯಕ್ತಿಕ ವ್ಯಕ್ತಿಗಾಗಿ "ಅಸ್ತಿತ್ವದಲ್ಲಿ" ಇರುವುದು ಎಂದು ಹೇಳಿದರೆ ಅದನ್ನು ಪ್ರಶ್ನಿಸ ಬೇಕಾಗುತ್ತದೆ.[4]

## ವರಗಳನ್ನು ಸ್ವೀಕರಿಸುವವರು

ಕ್ರೈಸ್ತರು ಆಗಲೇ ಪರಿಪೂರ್ಣತೆಗೆ ತಲುಪಿದ್ದಾರೆ ಎಂಬ ಕಾರಣದಿಂದಲ್ಲ, ಆದರೆ ಅವರು ಆತ್ಮಿಕ ಪ್ರೌಢತೆಗೆ ಬೆಳೆಯಲು ಸಹಾಯಮಾಡುವದಕ್ಕಾಗಿ ಆತ್ಮಿಕ ವರಗಳು ಕೊಡಲ್ಪಟ್ಟಿವೆ. ಇತ್ತೀಚೆಗೆ ಮಾರ್ಪಾಟು ಹೊಂದಿದವರಿಗೆ ವರಗಳು ಕೊಡಲ್ಪ ಟ್ಟಿವೆ (ಅಪೊಸ್ತಲರ ಕೃತ್ಯಗಳು 8:14-18; 19:6). ಶ್ರೇಷ್ಠವಾದ ಆತ್ಮಿಕತೆಯ ಆಳವನ್ನು ಹೊಂದಿದವರಿಗಾಗಿ ಅಲ್ಲ. ಕೊರಿಂಥ ಸಭೆಯು ಬೆಳೆಯುವ ಅಗತ್ಯತೆಯುಳ್ಳ ಹೊಸ ಕ್ರೈಸ್ತರಿಂದ ಮಾಡಲ್ಪಟ್ಟಿತ್ತು.

ಬ್ರೂನ್ನರ ಹೀಗೆ ಸೂಚಿಸಿದ್ದಾರೆ, "ಆತ್ಮಿಕ ವರಗಳು (ಇಲ್ಲವೇ ಪೌಲನ ವ್ಯಕ್ತಪಡಿಸುವಿಕೆಯನ್ನು ಉಪಯೋಗಿಸಿ, ಕೃಪಾವರಗಳು) ಬಹುಶಃ ತಮ್ಮ ಆಳವಾದ ಸಮರ್ಪಣೆ ಇಲ್ಲವೇ ಪರಿಶುದ್ಧಾತ್ಮನಿಗೆ ಬಹಳವಾದ ಸಾಮೀಪ್ಯತೆಯ ಪರಿಣಾಮದಂತೆ ಅಸಾಮಾನ್ಯವಾದ ಪ್ರಕಟನೆಗಳನ್ನು ಪ್ರದರ್ಶಿಸಿದ ಆಯ್ಕೆ ಮಾಡಲ್ಪಟ್ಟ ಕೆಲವರಿಗೆ ಮಾತ್ರ

ನೇಮಿತವಾಗಿರುವದಿಲ್ಲ."[5]

ವಿಶೇಷವಾದ ಆತ್ಮಿಕ ವರಗಳು ಆತ್ಮಿಕ ಶ್ರೇಷ್ಠತೆಗೆ ಭರವಸೆಯಾಗಿರಲಿಲ್ಲವೆಂಬುದು ಕೊರಿಂಥ ಸಭೆಯಲ್ಲಿ ಕಂಡುಬಂದಿತು. ಪೌಲನ ಅಭಿಪ್ರಾಯದಂತೆ ಕೊರಿಂಥದಲ್ಲಿಯ ಸಭೆಯು ಆತ್ಮಿಕ ಪ್ರೌಢಾವಸ್ಥೆಯಲ್ಲಿ ಕೊರತೆಯುಳ್ಳದ್ದಾಗಿತ್ತು. ಆ ಕ್ರೈಸ್ತರ ಬಗ್ಗೆ ಅವನು ಹೀಗೆ ಬರೆದನು,

> ಸಹೋದರರೇ, ನಾನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡ ಬೇಕಾಯಿತು. ನಿಮಗೆ ಹಾಲು ಕುಡಿಸಿದೆನು, ಅನ್ನಾ ಕೊಡಲಿಲ್ಲ; ಅನ್ನಾ ತಿನ್ನುವದಕ್ಕೆ ನಿಮಗೆ ಇನ್ನೂ ಶಕ್ತಿ ಇರಲಿಲ್ಲ. ಈಗಲಾದರೂ ಶಕ್ತಿಯಿಲ್ಲ; ಯಾಕಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ (1 ಕೊರಿಂಥ 3:1-3).

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮದ ಮುಖಾಂತರ, ಅಪೊಸ್ತಲತ್ವದ ಸಂಕೇತಗಳಂತೆ ವಿಶೇಷ ಬಲಗಳು ಕೊಡಲ್ಪಟ್ಟವು (2 ಕೊರಿಂಥ 12:12; ನೋಡಿರಿ ಅಪೊಸ್ತಲರ ಕೃತ್ಯಗಳು 1:8; 2:1-4). ದೇವರು ಈ ಸಂಕೇತಗಳನ್ನು ರಕ್ಷಣೆಗಾಗಿ ಅನ್ಯಜನರನ್ನು ತಾನು ಸ್ವೀಕರಿಸಿದ್ದನ್ನು ತೋರಿಸುವದಕ್ಕಾಗಿ ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 10:44, 45; 11:15; 15:7-9). ಅಪೊಸ್ತಲರ ಹಸ್ತಗಳನ್ನು ಇಡುವದರ ಮುಖಾಂತರ ಇತರರನ್ನು ವಿಶೇಷ ವರಗಳಿಂದ ತುಂಬಿಸುವದಕ್ಕಾಗಿ ಅವರಿಗೆ ಪರಿಶುದ್ಧಾತ್ಮನು ಕೊಡಲ್ಪಟ್ಟನು (ಅಪೊಸ್ತಲರ ಕೃತ್ಯಗಳು 8:14-18; 19:5, 6; 2 ತಿಮೊಥೆ 1:6). ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಮತ್ತು ಅಪೊಸ್ತಲರ ಹಸ್ತಗಳ ಮುಖಾಂತರ ವರಗಳು ಕೊಡಲ್ಪಟ್ಟದ್ದು ಸಂಪೂರ್ಣವಾಗಿ ಭಿನ್ನವಾದ ಘಟನೆಗಳಾಗಿವೆ.[6]

ಕೆಲವರು 2 ತಿಮೊಥೆ 1:6ರಲ್ಲಿಯ ತಿಮೊಥೆಯನಿಗೆ ಪೌಲನ ಹೇಳಿಕೆಯನ್ನು ಪರಿಶುದ್ಧಾತ್ಮನನ್ನು ಕೊಡಬಲ್ಲವರು ಅಪೊಸ್ತಲರು ಮಾತ್ರವೇ ಆಗಿರಲಿಲ್ಲ ಎಂಬುದನ್ನು ತೋರಿಸಲಿಕ್ಕೆ ರುಜುವಾತಾಗಿ ಉಪಯೋಗಿಸುತ್ತಾರೆ. ತನ್ನ "ಹಸ್ತಗಳನ್ನಿಡುವದರ ಮುಖಾಂತರ" ತಿಮೊಥೆಯನು ಒಂದು ವರವನ್ನು, *chrisma* ಎಂದು ಪೌಲನು ಬರೆದನು, "ಸಭೆ ಹಿರಿಯರು ಕೈಗಳನ್ನಿಡುವದರಿಂದ" ತಿಮೊಥೆಯನು ವರವನ್ನು ಹೊಂದಿದ್ದನೆಂದು ಈ ಮೊದಲು ಬರೆದಿದ್ದನು (1 ತಿಮೊಥೆ 4:14).

> ಪೌಲನು ಹಸ್ತಗಳನ್ನಿಡುವದರಿಂದ "through" ಇಲ್ಲವೇ "by" ತಿಮೊಥೆಯನು ಒಂದು ವರವನ್ನು ಹೊಂದಿಕೊಂಡನು (2 ತಿಮೊಥೆ 1:6). (*Dia* ಗ್ರೀಕ ಉಪಸರ್ಗಾವ್ಯಯವು ಷಷ್ಠಿ ವಿಭಕ್ತಿಯೊಂದಿಗೆ ಉಪಯೋಗಿಸಲ್ಪಡುವಾಗ, ಇತರ ಇನ್ನೊಂದು ಕಾರ್ಯದಿಂದ ಸಾಧನದ ಕೃತಿ ಎಂದರ್ಥವಾಗುತ್ತದೆ) ಇದು ಹೆಚ್ಚಾಗಿ "with" "(ದಿಂದ)" ಕೊಡಲ್ಪಟ್ಟ ವರವಾಗಿದ್ದಿರಬಹುದು. (*meta* ಉಪಸರ್ಗಾವ್ಯಯವು ಷಷ್ಠಿವಿಭಕ್ತಿಯೊಂದಿಗೆ "in accompaniment with" ಎಂದರ್ಥವಾಗುತ್ತದೆ). ಅಂದರೆ ಹಿರಿಯರ ಹಸ್ತಗಳೊಂದಿಗೆ ಕೊಡಲ್ಪಟ್ಟವರಾಗಿದ್ದಿರ ಬಹುದು (1 ತಿಮೊಥೆ 4:14). ಒಳ್ಳೇ ಕಾರಣಕ್ಕಾಗಿ ತಿಮೊಥೆಯನು ಹೀಗೆ ವರವನ್ನು ಸ್ವೀಕರಿಸಿದನು ಎಂಬುದನ್ನು ವಿವರಿಸುವಲ್ಲಿ ಪೌಲನು ಎರಡು ಭಿನ್ನವಾದ ಉಪಸರ್ಗಾವ್ಯಯಗಳನ್ನು ಉಪಯೋಗಿಸಿದನು.

> ಪೌಲನ ಹಸ್ತಗಳ ಸಾಧನದ ಮುಖಾಂತರ ಹಿರಿಯರ ಹಸ್ತಗಳೊಂದಿಗೆ ಯೇಸುವು ತಿಮೊಥೆಯನಿಗೆ ವರವನ್ನು ಕೊಟ್ಟನು. ವರವು ಕೊಡಲ್ಪಡಲು ಪೌಲನ ಹಸ್ತಗಳು ಸಾಧನ ಮತ್ತು ಪೌಲನೊಂದಿಗೆ ಹಿರಿಯರು ವರದ ಉಪಯೋಗವನ್ನು ತಿಮೊಥೆಯನಿಗೆ ಒಪ್ಪಿಸಲು ತಮ್ಮ ಕೈಗಳನ್ನಿಟ್ಟರು.[7]

ಹಸ್ತಗಳನ್ನಿಡುವದಕ್ಕೆ ವಿವಿಧ ಉದ್ದೇಶಗಳಿದ್ದವು: (1) ಇನ್ನೊಬ್ಬರ ಮೇಲೆ ಆಶೀರ್ವಾದ ಕೊಡುವುದು (ಮತ್ತಾಯ 19:15), (2) ಗುಣಪಡಿಸುವಿಕೆಯಲ್ಲಿ ಸಂಪರ್ಕ ಶಕ್ತಿಯನ್ನು ಒದಗಿಸುವುದು (ಲೂಕ 4:40; 13:13), (3) ಪರಿಶುದ್ಧಾತ್ಮನ ವರಗಳನ್ನು ಕೊಡುವುದು (ಅಪೊಸ್ತಲರ ಕೃತ್ಯಗಳು 8:14-18; 19:6; 2 ತಿಮೊಥೆ 1:6), ಮತ್ತು ವಿಶೇಷ ಜವಾಬ್ದಾರಿಕೆಗಳಿಗೆ ಇಲ್ಲವೇ ಹುದ್ದೆಗಳಿಗೆ ಜನರನ್ನು ನಿಯೋಗಿಸುವುದು (ಅಪೊಸ್ತಲರ ಕೃತ್ಯಗಳು 6:6; 13:3). ಕೊನೆಯ ಎರಡು ಉದ್ದೇಶಗಳು ಸುವಾರ್ತಿಕನ ಕೆಲಸ ಮಾಡುವದಕ್ಕೆ ತಿಮೊಥೆಯನನ್ನು ಸಿದ್ಧಪಡಿಸುವದಕ್ಕೆ ಸಂಭವಿಸಿದವು. ಪೌಲನ ಹಸ್ತಗಳ "ಮುಖಾಂತರ" ತಿಮೊಥೆಯನಿಗೆ ವರವು ಕೊಡಲ್ಪಟ್ಟಿತು (2 ತಿಮೊಥೆ 1:6). ಪೌಲನೊಂದಿಗೆ ಅವರನ್ನು ಉಪಯೋಗಿಸುವದಕ್ಕಾಗಿ ತಿಮೊಥೆಯನನ್ನು ನೇಮಿಸಿದಾಗ ಸಭಾ ಹಿರಿಯರು ತಮ್ಮ ಕೈಗಳನ್ನಿಟ್ಟರು (1 ತಿಮೊಥೆ 4:14).

ಕೆಲವು ನಿರ್ದಿಷ್ಟ ಜನರಿಗೆ ಮಾತ್ರ ಆತ್ಮಿಕ ವರಗಳಿದ್ದವು: (1) ಅಪೊಸ್ತಲರ ಮತ್ತು ಮೊದಲ ಅನ್ಯಜನಾಂಗದ ಕ್ರೈಸ್ತರನ್ನು ಬಿಟ್ಟು ಪರಿಶುದ್ಧಾತ್ಮನ ವರಗಳು ಅಪೊಸ್ತಲರ ಹಸ್ತಗಳನ್ನಿಡುವದರ ಮುಖಾಂತರ ಕೊಡಲ್ಪಟ್ಟವು (ಅಪೊಸ್ತಲರ 19:6). (2) ಯಾವ ಅಪೊಸ್ತಲನ ಮುಖಾಂತರ ವರಗಳು ಕೊಡಲ್ಪಟ್ಟವೋ ಆ ಅಪೊಸ್ತಲನು ವರವನ್ನು ಕೊಡಲು ಅಲ್ಲಿ ಹಾಜರಿರಬೇಕಾಗಿತ್ತು (ಗ್ರೀಕ: *chrisma* ರೋಮಾಪುರ 1:11). (3) ಪ್ರತಿಯೊಬ್ಬನು ಹೊಂದಿಕೊಂಡ ವರವು ಪರಿಶುದ್ಧಾತ್ಮನ ಚಿತ್ತದ ಮೇಲೆ ಅವಲಂಭಿಸಿತ್ತು, ಆದರೆ ವರವನ್ನು ಹೊಂದಲಪೇಕ್ಷಿಸಿದವನ ಅಪೇಕ್ಷೆಯ ಮೇಲೆ ಅವಲಂಭಿಸಿರಲಿಲ್ಲ (1 ಕೊರಿಂಥ 12:11). (4) ಒಂದು ಸಭೆಯಲ್ಲಿ ಕಂಡುಬಂದ ವರಗಳು ಆ ಸಭೆಗೆ ಅಪೊಸ್ತಲನು ಸಂದರ್ಶಿಸಿದ್ದಾನೆ ಎಂಬುದಕ್ಕೆ ಗುರುತಾಗಿದ್ದವು (1 ಕೊರಿಂಥ 9:1, 2).

ಉದಾಹರಣೆಯಾಗಿ, ಕೊರಿಂಥದಲ್ಲಿಯ ಸಭೆಗೆ "ವರಗಳ ಕೊರತೆಯಿರಲಿಲ್ಲ" (1 ಕೊರಿಂಥ 1:7). ಇದು ಸತ್ಯವಾಗಿತ್ತು, ಯಾಕಂದರೆ ಅಪೊಸ್ತಲನಾದ ಪೌಲನು ಕೊರಿಂಥವನ್ನು ಸಂದರ್ಶಿಸಿದ್ದನು. ಪೌಲನು ಕೊರಿಂಥದಲ್ಲಿದ್ದಾಗ ಮಾಡಿದ್ದಂತೆಯೇ ಇತರ ಅಪೊಸ್ತಲರು ತಮ್ಮ ಅಪೊಸ್ತಲತನಕ್ಕೆ ಸಂಕೇತದಂತೆ ಅವರಿಗೆ ವರಗಳನ್ನು ಕೊಟ್ಟಿರಬೇಕು (2 ಕೊರಿಂಥ 12:12); ಹಾಗಿದ್ದರೂ, ಇತರರು ಅಲ್ಲಿಗೆ ಹೋಗಿದ್ದಿರಲಿಲ್ಲ, ಈ ಸಂಗತಿಯ ಮೇಲೆ ಅವಲಂಭಿಸಿ, ಪೌಲನು ಕೊರಿಂಥ ಸಭೆಯನ್ನು ತಾನು ಒಬ್ಬ ಅಪೊಸ್ತಲನಾಗಿದ್ದನೆಂಬುದಕ್ಕೆ ಪುರಾವೆಯಾಗಿ ಉಪಯೋಗಿಸಬಹುದಿತ್ತು:

> ನಾನು ಸ್ವತಂತ್ರನಲ್ಲವೇ? ಅಪೊಸ್ತಲನಲ್ಲವೇ. ನಮ್ಮ ಕರ್ತನಾದ ಯೇಸುವನ್ನು ಕಂಡವನಲ್ಲವೇ. ನಾನು ಕರ್ತನ ಸೇವೆಯಲ್ಲಿ ಮಾಡಿದ ಕೆಲಸದ ಫಲವು ನೀವೇ ಅಲ್ಲವೇ. ಇತರರಿಗೆ ನಾನು ಅಪೊಸ್ತಲನಲ್ಲದಿದ್ದರೂ ನಿಮಗಾದರೂ ಅಪೊಸ್ತಲನಾಗಿದ್ದೇನೆ. ನಾನು ಅಪೊಸ್ತಲನಾಗಿದ್ದೇನೆಂಬದಕ್ಕೆ ಕರ್ತನಿಗೆ ಸೇರಿದ ವರಾದ ನೀವೇ ಪ್ರಮಾಣವಾಗಿದ್ದೀರಷ್ಟೇ (1 ಕೊರಿಂಥ 9:1, 2).

ಕೊರಿಂಥ ಸಭೆಯು ಪೌಲನ ಅಪೊಸ್ತಲತನಕ್ಕೆ ಮುದ್ರೆಯಾಗಿತ್ತು, ಯಾಕಂದರೆ

ಅವರಿಗೆ ಯಾವ ವರದ ಕೊರತೆಯೂ ಇರಲಿಲ್ಲ. ಅಪೊಸ್ತಲರು ಕೊಡಲು ಶಕ್ತರಾಗಿದ್ದ ಎಲ್ಲಾ ವರಗಳೂ ಅಲ್ಲಿದ್ದವು. ಪೌಲನ ಅಪೊಸ್ತಲತನವನ್ನು ಯಾರಾದರೂ ಪ್ರಶ್ನಿಸಿದರೆ, ಅವನು ಕೊರಿಂಥ ಸಭೆಯವರನ್ನು ತೋರಿಸಿ, "ಅವರು ನನ್ನ ಅಪೊಸ್ತಲತನದ ಮುದ್ರೆಯಾಗಿದ್ದಾರೆ" ಎಂದು ಹೇಳಬಹುದಿತ್ತು. ಅಪೊಸ್ತಲರು ಮಾತ್ರವೇ ವರ ಗಳನ್ನು ಕೊಡಬಲ್ಲವರಾಗಿದ್ದುದರಿಂದ - ಮತ್ತು ಬೇರೆ ಯಾವುದೇ ಅಪೊಸ್ತಲನು ಕೊರಿಂಥಕ್ಕೆ ಹೋಗದೇ ಇದ್ದುದರಿಂದ - ಕೊರಿಂಥವರಿಗೆ ವರಗಳಿದ್ದದ್ದು ಪೌಲನು ಅಪೊಸ್ತಲನಾಗಿದ್ದನು ಎಂಬುದಕ್ಕೆ ಯಾವುದೇ ಸಂಶಯವಿರಲಿಲ್ಲ. ಈ ಸತ್ಯದ ಮೇಲೆ ಅವಲಂಬಿಸಿ, ಅಪೊಸ್ತಲರು ಮಾತ್ರವೇ ವರಗಳನ್ನು ಕೊಡಬಲ್ಲವರಾಗಿದ್ದರು ಎಂದು ನಾವು ತೀರ್ಮಾನಿಸಬಹುದು; ಅಪೊಸ್ತಲರಲ್ಲದವರು ವರಗಳನ್ನು ಕೊಡಬಲ್ಲವರಾಗಿದ್ದರೆ, ಆಗ ಪೌಲನು ತನ್ನ ಅಪೊಸ್ತಲ ತನಕ್ಕೆ ಕೊರಿಂಥವನ್ನು ಮುದ್ರೆಯಂತೆ ಉಪಯೋಗಿಸುತ್ತಿರಲಿಲ್ಲ.

## ವರಗಳ ಸ್ವರೂಪ

ಪ್ರಾರಂಭದ ಕೊರಿಂಥ ಸಭೆಯಲ್ಲಿ ಒಂಭತ್ತು ವರಗಳಲ್ಲಿ ಪ್ರತಿಯೊಂದೂ ಲಾಭದಾಯಕವಾದದ್ದಾಗಿತ್ತು. ಆ ಸಮಯದಲ್ಲಿ, ದೇವರ ಪ್ರಕಟನೆಯು ಸಂಪೂರ್ಣ ವಾಗಿದ್ದಿರಲಿಲ್ಲ; ಆತನ ವಾಕ್ಯವು ದಾಖಲೆ ಮಾಡಲ್ಪಟ್ಟಿರಲಿಲ್ಲ. ಅದು ದೃಢೀಕರಿಸಲ್ಪಡ ಬೇಕಾಗಿತ್ತು. ಆದುದರಿಂದ ನಂಬುತ್ತಿದ್ದ ಸಮಾಜದಲ್ಲಿ ವರಗಳು ಈ ನೂತನ ಕ್ರೈಸ್ತರಿಗೆ ಬೋಧಿಸುವದಕ್ಕೂ ಬಲಪಡಿಸುವದಕ್ಕೂ ಉಪಯುಕ್ತವಾದವುಗಳಾಗಿದ್ದವು.

ಪರಿಶುದ್ಧಾತ್ಮನ ಮುಖಾಂತರ ದೈವಿಕವಾಗಿ ಕೊಡಲ್ಪಟ್ಟ (1 ಕೊರಿಂಥ 12:11) "ಜ್ಞಾನ ವಾಕ್ಯದ" ವರವು (1 ಕೊರಿಂಥ 12:8) ಮಾನವ ಪ್ರಯತ್ನ ಮತ್ತು ಸಾಮರ್ಥ್ಯದಿಂದ ಬರುವಂಥದ್ದಕ್ಕಿಂದ ಭಿನ್ನವಾಗಿತ್ತು. ಈ ಭಿನ್ನತೆಯನ್ನು ಪೌಲನು ಒತ್ತಿಹೇಳುತ್ತಾನೆ:

> ನಿಮ್ಮ ನಂಬಿಕೆಯು ಮಾನುಷಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರ ಮಾಡಿಕೊಂಡಿರ ಬೇಕೆಂಬುದನ್ನು ನನ್ನ ಬೋಧನೆಯ ಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನ ವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನು ಪ್ರಯೋಗಿಸಿದೆನು.
>
> ಆದರೂ ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ, ಇಲ್ಲದೆ ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ. ಇದು ವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳು ತ್ತೇವೆ. ಅದು ಯಾವದಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆ ಮಾಡಿದ ಜ್ಞಾನವೇ (1 ಕೊರಿಂಥ 2:4-7).

> ... ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ... (1 ಕೊರಿಂಥ 2:13).

"ಜ್ಞಾನದ ವಾಕ್ಯವು" ಪೌಲನ ಮನಸ್ಸಿನಲ್ಲಿ ಇದ್ದದ್ದು ಮಾನವ ಜ್ಞಾನವಾಗಿರಲಿಲ್ಲ, ಆದರೆ ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ದೇವರ ಜ್ಞಾನವಾಗಿತ್ತು.

"ವಿದ್ಯಾ ವಾಕ್ಯವು" (1 ಕೊರಿಂಥ 12:8), ಜ್ಞಾನದಂತೆ ದೈವಿಕವಾಗಿ ಕೊಡಲ್ಪಟ್ಟ ಜ್ಞಾನವಾಗಿತ್ತು (ಗ್ರೀಕ: *gnosis*).[8] ಈ ಜ್ಞಾನವು ತಿಳುವಳಿಕೆಯೊಂದಿಗೆ ಕ್ರಿಸ್ತನಲ್ಲಿ ರಹಸ್ಯವಾಗಿತ್ತು (ಕೊಲೊಸ್ಸೆ 2:2, 3) ಮತ್ತು ಪರಿಶುದ್ಧಾತ್ಮನ ಮುಖಾಂತರ ಅದು ಪ್ರಕಟಿಸಲ್ಪಡುವವರೆಗೆ ರಹಸ್ಯವಾಗಿಯೇ ಉಳಿದಿತ್ತು (ಎಫೆಸ 3:3-5). ಬೈಬಲಿನಲ್ಲಿ ಹೇಳಲ್ಪಟ್ಟ ಇನ್ನೊಂದು ರೀತಿಯ ಜ್ಞಾನವು ಮಾನವ ವಿವೇಚನೆಯ ಇಲ್ಲವೇ ಮಾನವ ಅನುಭವದ ಮುಖಾಂತರ ತಲುಪುವಂಥದ್ದಾಗಿರುತ್ತದೆ (ಗ್ರೀಕ *sunioda;* ಅಪೊಸ್ತಲರ ಕೃತ್ಯಗಳು 5:2). ಮಾನವ ಜ್ಞಾನದ ಬದಲು, "ಜ್ಞಾನದ ವಾಕ್ಯವು," "ದೇವರ ಜ್ಞಾನ" ವಾಗಿದೆ, ಜ್ಞಾನದೊಂದಿಗೆ ಪ್ರಕಟನೆಯ ಮುಖಾಂತರ ಮಾತ್ರವೇ ತಿಳಿಯಲ್ಪಡಬಹುದು (ರೋಮಾಪುರ 11:33).

ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ "ನಂಬಿಕೆ"ಯು (1 ಕೊರಿಂಥ 12:9) ದೇವರ ವಾಕ್ಯದ ಅಭ್ಯಾಸದ ಮುಖಾಂತರ ಹೊಂದಿದ ನಂಬಿಕೆಯಿಂದ ಭಿನ್ನವಾಗಿರುವುದು (ಅಪೊಸ್ತಲರ ಕೃತ್ಯಗಳು 17:11, 12; ರೋಮಾಪುರ 10:17). ಅದು ದೇವರ ವಾಕ್ಯದ ಮುಖಾಂತರ ಪ್ರಕಟಿಸಲ್ಪಟ್ಟ ಬೋಧನೆಗಿಂಥಲೂ ಭಿನ್ನವಾಗಿರುವುದು (ಗಲಾತ್ಯ 3:23; ಫಿಲಿಪ್ಪಿ 1:27; 1 ತಿಮೊಥೆ 3:9; ಯೂದ 3). ಒಂದು ವರದಂತೆ ಈ ನಂಬಿಕೆಯನ್ನು ಪರಿಶುದ್ಧಾತ್ಮನು ಕೊಟ್ಟನು; ಇದರ ಮುಖಾಂತರ ಅಂಥ ನಂಬಿಕೆಯನ್ನು ಹೊಂದಿದವರಿಗೆ ಆತ್ಮಿಕ ಶಕ್ತಿಗಳು ಲಭ್ಯವಾಗುವಂತೆ - ಮಾಡಲ್ಪಟ್ಟವು (1 ಕೊರಿಂಥ 12:11; 13:2).

"ರೋಗಿಗಳನ್ನು ವಾಸಿಮಾಡುವ ವರವು" ಮತ್ತು "ಮಹತ್ತುಗಳನ್ನು ಮಾಡುವ ವರವು" (1 ಕೊರಿಂಥ 12:9, 10) ಇವೂ ಸಹ ಪರಿಶುದ್ಧಾತ್ಮನ ವರಗಳೇ ಆಗಿರವವು. ಈ ವರಗಳ್ಳು ಹೊಂದಿದವರು ರೋಗಿಗಳಿಗೆ ಸೇವೆ ಮಾಡುವಲ್ಲಿ ಮಾನವ ಸಾಮರ್ಥ್ಯವನ್ನು ದಾಟಿ ಹೋಗುವಂತೆ ಈ ವರಗಳು ಅವರನ್ನು ಬಲದಿಂದ ತುಂಬಿಸಿದವು.

"ಪ್ರವಾದನೆಯ" ಮತ್ತು "ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ" ವರವು ದೇವರ ವಾಕ್ಯದ ಪ್ರಕಟನೆಗೆ ಸಂಬಂಧಿಸಿವೆ (1 ಕೊರಿಂಥ 12:10). ಕ್ರೈಸ್ತತ್ವದ ಹಿಂದಿನ ಅವಧಿಯಲ್ಲಿ ಹಳೇ ಒಡಂಬಡಿಕೆಯ ಪ್ರವಾದಿಗಳ ಮುಖಾಂತರ ಪರಿಶುದ್ಧಾತ್ಮನಿಂದ ತನ್ನ ವಾಕ್ಯವನ್ನು ದೇವರು ಪ್ರಕಟಿಸಿದನು (2 ಪೇತ್ರ 1:20, 21). ಹೊಸ ಒಡಂಬಡಿಕೆಯ ಯುಗದಲ್ಲಿಯೂ ದೇವರ ವಾಕ್ಯವು ಪ್ರತಿಯೊಬ್ಬರಿಗೂ ಕೊಡಲ್ಪಡಲಿಲ್ಲ, ಆತನು ತನ್ನ ಪರಿಶುದ್ಧಾತ್ಮನ ಮೂಲಕ ಪ್ರಕಟನೆಯನ್ನು ಅಪೊಸ್ತಲರಿಗೆ ಮತ್ತು ಪ್ರವಾದಿಗಳಿಗೆ ಮಾತ್ರವೇ ಮಿತಿಗೊಳಿಸಿದ್ದನು. ಅವರು ಬರೆದದ್ದನ್ನು ಓದುವದರಿಂದ ಮಾತ್ರವೇ ಇತರರು ದೇವರ ಪ್ರಕಟನೆಯನ್ನು ಕಲಿಯ ಬಹುದು (ಎಫೆಸ 3:3-5).

ಆತ್ಮಗಳ ವ್ಯತ್ಯಾಸವನ್ನು ಮಾಡುವವರಿಗೆ ನಿಜವಾದ ಮತ್ತು ಸುಳ್ಳು ಬೋಧಕರಲ್ಲಿ ವ್ಯತ್ಯಾಸ ಕಂಡುಕೊಳ್ಳುವಂತೆ ಪರಿಶುದ್ಧಾತ್ಮನಿಂದ ಆ ವರವು ಕೊಡಲ್ಪಟ್ಟಿತು (1 ಕೊರಿಂಥ 12:10; 14:29).

ಪಟ್ಟಿಯ ಕೆಳಗೆ "ವಿವಿಧ ವಾಣಿಗಳನ್ನಾಡುವ ವರವು" ಹಾಗೂ "ವಾಣಿಗಳ ಅರ್ಥವನ್ನು ಹೇಳುವ ವರವು" ಇರುತ್ತದೆ (1 ಕೊರಿಂಥ 12:10). ಈ ವರಗಳನ್ನು ಹೊಂದಿದವರು ತಾವು ಕಲಿಯದೇ ಇದ್ದ ಭಾಷೆಗಳಲ್ಲಿ ಮಾತಾಡಬಹುದು ಇಲ್ಲವೇ ತಾವು ಹಿಂದೆ ತಿಳಿಯದಿದ್ದ ಅಥವಾ ಕಲಿಯದಿದ್ದ ಭಾಷೆಗಳನ್ನು ವ್ಯಾಖ್ಯಾನಿಸಬಹುದು.[9]

ವರಗಳ ಉದ್ದೇಶವು ಪರಿಶುದ್ಧಾತ್ಮನನ್ನು ಮಹಿಮೆ ಪಡಿಸುವದಕ್ಕಾಗಿಯಾಗಲೀ, ಇಲ್ಲವೇ ಆತನು ವರಗಳನ್ನು ಕೊಟ್ಟವರನ್ನು ಮಹಿಮೆ ಪಡಿಸುವದಕ್ಕಾಗಲೀ ಇರಲಿಲ್ಲ. "ಆತನು ನನ್ನನ್ನು ಮಹಿಮೆಪಡಿಸುವನು" (ಯೋಹಾನ 16:14ಎ) ಎಂದು ಯೇಸು ಪರಿಶುದ್ಧಾತ್ಮನನ್ನು ಕುರಿತು ಹೇಳಿದನು. ಯೇಸುವಿಗಿಂತ ಹೆಚ್ಚಾಗಿ ಒಬ್ಬ ವ್ಯಕ್ತಿಗಾಗಲೀ

ಇಲ್ಲವೇ ಪರಿಶುದ್ಧಾತ್ಮನಿಗಾಗಲಿ ಮಹಿಮೆ ತರುವ ಯಾವುದೇ ಬೋಧನೆಯು ಇಲ್ಲವೇ ಆಚರಣೆಯು ಪರಿಶುದ್ಧಾತ್ಮನ ಉದ್ದೇಶದೊಂದಿಗೆ ಮತ್ತು ಕಾರ್ಯದೊಂದಿಗೆ ಹೊಂದಾಣಿಕೆಯಿಲ್ಲದ್ದಾಗಿರುತ್ತದೆ.

## ಮುಕ್ತಾಯ

ವಿಶ್ವಾಸದಲ್ಲಿ ಸ್ಥಾಪಿಸಲ್ಪಡಲಿಕ್ಕಾಗುವಂತೆ, ಪ್ರೌಢಾವಸ್ಥೆಗೆ ಬೆಳೆಯಲಿಕ್ಕಾಗುವಂತೆ, ಮತ್ತು ಭಕ್ತಿವೃದ್ಧಿ ಹೊಂದಲಿಕ್ಕಾಗುವಂತೆ ಆತ್ಮಿಕ ವರಗಳು ಪ್ರೌಢಾವಸ್ಥೆಗೇರಿದ ಸಭೆಗೆ ಕೊಡಲ್ಪಟ್ಟವು. ವರಗಳು ಅಪೊಸ್ತಲರಿಗೆ ಒಪ್ಪಿಸಲ್ಪಟ್ಟವು. ಅಪೊಸ್ತಲರ ಹಸ್ತಗಳ ಮುಖಾಂತರ ಪರಿಶುದ್ಧಾತ್ಮ ಚಿತ್ತಕ್ಕನುಗುಣವಾಗಿ ಆತನಿಂದ ಅವು ಹಂಚಲ್ಪಟ್ಟವು. ಶಿಶುವಿನಂತಿದ್ದ ಕ್ರೈಸ್ತರಿಗೆ ವಿಶ್ವಾಸದಲ್ಲಿ ಬೆಳೆಯಲು ಸಹಾಯ ಮಾಡುವದಕ್ಕಾಗಿ ವರಗಳು ಕೊಡಲ್ಪಟ್ಟವು. ಪರಿಶುದ್ಧಾತ್ಮನ್ನಾಗಲೀ ಇಲ್ಲವೇ ವರಗಳು ಕೊಡಲ್ಪಟ್ಟವರನ್ನಾಗಲೀ ಮಹಿಮೆ ಪಡಿಸುವದಕ್ಕಿಂತ ಮಹಿಮೆಯು ಯೇಸುವಿಗೆ ಕೊಡಲ್ಪಡತಕ್ಕದ್ದು.

---

ಟಿಪ್ಪಣಿಗಳು

[1]F. W. Grosheide, *Commentary on the First Epistle to the Corinthians,* The New International Commentary on the New Testament (Grand Rapids, Mich.: Wm. B. Eerdmans Publishing Co., 1953), 283. [2]Gordon D. Fee, *The First Epistle to the Corinthians,* The New International Commentary on the New Testament (Grand Rapids, Mich.: Wm. B. Eerdmans Publishing Co., 1987), 586. [3]Robert G. Bratcher, A *Translator's Guide to Paul's First Letter to the Corinthians* (New York: United Bible Societies, 1982), 124. [4]Frederick Dale Bruner, *A Theology of the Holy Spirit* (Grand Rapids, Mich.: Wm. B. Eerdmans Publishing Co., 1970), 290. [5]Ibid. [6]ಪರಿಶುದ್ಧಾತ್ಮನ ಆಂತರ್ಯದಲ್ಲಿ ವಾಸಿಸುವಿಕೆಯು ಅದ್ಭುತಕರವಾದ ವರಗಳಿಂದ ಭಿನ್ನವಾಗಿಡತಕ್ಕದ್ದು. ಅಪೊಸ್ತಲರ ಹಸ್ತಗಳು ಇಡಲ್ಪಡುವದರಿಂದ ಮಾತ್ರವೇ ಅದ್ಭುತಕರವಾದ ವರಗಳು ಕೊಡಲ್ಪಡುವಾಗ, ಪುತ್ರತ್ವದ ದೃಢಪಡಿಸುವಿಕೆಯಂತೆ ಎಲ್ಲಾ ಕ್ರೈಸ್ತರಿಂದ ಆತ್ಮನ ಆಂತರ್ಯದಲ್ಲಿ ವಾಸಿಸುವಿಕೆಯು ಸ್ವೀಕರಿಸಲ್ಪಡುತ್ತದೆ. [7]Owen D. Olbricht, *Baptism: New Birth or Empty Ritual?* (Delight, Ark.: Gospel Light Publishing Co., 1994), 141-42. [8]ಲೂಕ 1:77; 11:52; ರೋಮಾಪುರ 2:20; 11:33; 15:14; 1 ಕೊರಿಂಥ 1:5; 13:2, 8; 14:6; 2 ಕೊರಿಂಥ 2:14; 4:6; 8:7. [9]ವಾಣಿಗಳನ್ನಾಡುವದರ ಬಗ್ಗೆ ಚರ್ಚೆಯನ್ನು ಈ ಪುಸ್ತಕದಲ್ಲಿ ಅನಂತರ ಬರುವ "ವಾಣಿಗಳನ್ನಾಡುವುದು ಹಾಗೂ ಪರಿಶುದ್ಧಾತ್ಮನು" ಎಂಬ ಪಾಠದಲ್ಲಿ ಕಂಡುಕೊಳ್ಳಬಹುದು.

© 2009 Truth for Today